# ಹಬ್ಬದ ಸಂಭ್ರಮ ತುಂಬಿದ ಮನೆಯಲ್ಲಿ ಒಡಕಿಗೆ ಮುನ್ನುಡಿ

ಅಧ್ಯಾಯ–1

ಜಗದೀಶ ಅಯ್ನೋರ ಮನೆ ನೆಂಟರಿಷ್ಟರಿಂದ ಕೂಡಿ ಗಿಜಿಗುಡುತ್ತಿತ್ತು. ಮನೇಲಿ ಹಿರಿಯರಿಗೆ ಎಡೆ ಇಕ್ಕುವ ದಿನ ಅದು. ಸಾಮಾನ್ಯವಾಗಿ ಹಿರಿಯರಿಗೆ ಎಡೆ ಇಕ್ಕುವ ದಿನವನ್ನು ತಿಥಿ ಅಂತ ಎಲ್ಲ ಕಡೆ ಕರೆದ್ರೆ ಈ ಕಡೆ ಮಾತ್ರ ಹಿರಿಯೋರ ಹಬ್ಬ ಅಂತಾನೇ ಕರೆಯೋದು. ಆ ದಿನ ಮನೆ ಹೆಣ್ಣುಮಕ್ಕಳು, ತೌರುಮನೆಗೆ ಎರಡು ದಿವಸ ಮುಂಚಿತವಾಗಿಯೇ ಬಂದಿರುತ್ತಾರೆ. ನಾಲ್ಕು ದಿವಸ ಇದ್ದೇ ಹೋಗಬೇಕು ಎಂದು ತಯಾರಿ ನಡೆಸಿಕೊಂಡೇ ಬಂದಿರುತ್ತಾರೆ. ನಾಲ್ಕು ದಿನ ತೌರು ಮನೆಯ ಆತಿಥ್ಯ ಉಂಡು, ಗಂಡನ ಮನೆಯನ್ನು ಅಷ್ಟೂ ದಿನವೂ ಮರೆತು ಅಪ್ಪ–ಅಮ್ಮ ಇಲ್ಲದ ಆ ಮನೆಯಲ್ಲಿ ಅದಕ್ಕಿಂತಲೂ ಹೆಚ್ಚಾಗಿ ಮಮತೆಯಿಂದ ಕಾಣುವ ಅಣ್ಣ ತಮ್ಮಂದಿರ ಔದಾರ್ಯದಲ್ಲಿ ವಾತ್ಸಲ್ಯದಲ್ಲಿ ಮಿಂದು, ಮತ್ತೆ ತಮ್ಮ ಮನೆಗಳಿಗೆ ಹೋಗುವಾಗ ತೌರು ಮನೆಯಲ್ಲಿ ತಾಯಿಯಂತೆ ಪ್ರೀತಿಯಿಂದ ಅತ್ತಿಗೆ ನಾದಿನಿಯರು ಮಡಿಲು ತುಂಬಿಸಿದ ಮಡ್ಲಕ್ಕಿ ಜೊತೆ, ಸಹೋದರರು ತಂದು ಕೊಟ್ಟ ಹೊಸ ಸೀರೆ ಉಟ್ಟುಕೊಂಡು ತೌರುಮನೆ ಹಿಂಗೇ ಬೆಳೆಯಲಿ ಅಂತ ಹರಸಿಯೇ ಹೊರಡುತ್ತಾರೆ. ಇದು ಜಗದೀಶ ಅಯ್ನೋರ ತಾತ ಮುತ್ತಾತನ ಕಾಲದಿಂದಲೂ ನಡ್ಕೊಂಡು ಬಂದಿದೆ. ಆ ಕಾಲದಿಂದಲೂ ಹಿರಿಯರ ಹಬ್ಬ ಅಂದ್ರೆ ಆ ಮನೆಯೋರಿಗೆ ಜೋರು. ಒಂಥರ ಸಡಗರ, ಸಂಭ್ರಮ. ತಿಂಗಳ ಮುಂಚೆನೇ ನೆಂಟರಿಷ್ಟರಿಗೆಲ್ಲ ಕರೆ ಹೋಗುತ್ತದೆ. ಮನೆಯ ಹೆಣ್ಣುಮಕ್ಕಳಷ್ಟೇ ಅಲ್ಲದೆ, ಅವರ ಹೆಣ್ಣುಮಕ್ಕಳು, ಅಳಿಯಂದಿರು, ಗಂಡುಮಕ್ಕಳು ಸೊಸೆಯರಿಗೂ ಕರೆ ಹೋಗುತ್ತದೆ. ಇನ್ನು ಆ ಮನೆಗೆ ಹೆಣ್ಣು ಕೊಟ್ಟ ಬೀಗರಿಗೂ ವಿಶೇಷ ಆಹ್ವಾನ ಇದ್ದೇ ಇರುತ್ತದೆ. ಹಂಗಾಗಿ ವರ್ಷಕ್ಕೊಮ್ಮೆ ಆ ಮನೆಯಲ್ಲಿ ಮದುವೆಯ ಮನೆಯಂತೆ ಜನ ತುಂಬುತ್ತಾರೆ. ಮನೆಯೂ ದೊಡ್ಡದೇ. ಎಷ್ಟು ಜನ ಬಂದರೂ ತೊಂದರೆ ಇಲ್ಲ. ಜಗದೀಶ ಅಯ್ನೋರ ಜೊತೆ ಹುಟ್ಟಿದವರು ಮಹದೇವ ಅಯ್ನೋರು ಮತ್ತು ನಾಲ್ಕು ಜನ ಹೆಣ್ಣುಮಕ್ಕಳು. ಹೆಣ್ಣುಮಕ್ಕಳಿಗೆಲ್ಲಾ ಜಗದೀಶ ಅಯ್ನೋರ ತಂದೆ ಇದ್ದಾಗಲೇ ಮದ್ವೆ ಮಾಡಿ ಕೊಡಲಾಗಿತ್ತು. ಮಹದೇವ ಅಯ್ನೋರ ಮದ್ವೆಗೆ ಮಾತ್ರ ಅವರಪ್ಪ ಇರಲಿಲ್ಲ. ಎಲ್ಲರಿಗಿಂತ ಕೊನೆಯವನು ಮಹದೇವ. ಜಗದೀಶರೇ ಹೆಣ್ಣು ಹುಡುಕಿ ತಮ್ಮನಿಗೆ ಮದ್ವೆ ಮಾಡಿದ್ದರು. ಅಣ್ಣ ತಮ್ಮಂದಿರು ಒಟ್ಟಿಗೆ ಒಂದೇ ಮನೆಯಾಗೆ ರಾಮ–ಲಕ್ಷ್ಮಣರಂಗೆ ಇದ್ದರು.

ಹಬ್ಬದ ದಿನ ಮನೆಯಲ್ಲಿ ಬಂಧುಬಾಂಧವರು ಸೇರಿ ಮನೆ ಗಿಲಗಿಲ ಅನ್ನುತ್ತಿತ್ತು. ಅವತ್ತು ಮನೆಯ ಹೆಂಗಸರಿಗೆ ಅಡುಗೆ ಮನೆಯ ಒಳಗೆ ಕೈ ತುಂಬಾ ಕೆಲಸ. ಎಡೆ ಇಡಲು ಮಡಿಯಿಂದ ಅಡುಗೆ ಆಗಬೇಕು. ನಾನಾ ತರಹದ ಅಡುಗೆಗಳು

